## ಕರ್ನಾಟಕ ವಿಧಾನ ಪರಿಷತ್ತು.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 185
2. ಮಾನ್ಯ ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ ರಾಥೋಡ್
3. ಉತ್ತರಿಸುವ ದಿನಾಂಕ : 14.12.2021
4. ಉತ್ತರಿಸುವ ಸಚಿವರು : ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಸಹಕಾರಿ ಮೂಲದಿಂದ ನಡೆಸುತ್ತಿರುವ ಸಕ್ಕರೆ ಕಾರ್ಖಾನೆಗಳಿಗೆ ನೀಡಿರುವ ಸಾಲಗಳೆಷ್ಟು; (ವಿವರ ನೀಡುವುದು) | ರಾಜ್ಯದ ಸಹಕಾರಿ ವಲಯದಲ್ಲಿ ಒಟ್ಟು 31 ಸಕ್ಕರೆ ಕಾರ್ಖಾನೆಗಳಿದ್ದು ಇದರಲ್ಲಿ, 15 ಕಾರ್ಯನಿರತ, 08 ಖಾಸಗಿಯವರಿಗೆ ಗುತ್ತಿಗೆ ನೀಡಿರುವ, 03 ಸ್ಥಗಿತಗೊಂಡಿರುವ ಮತ್ತು 05 ಸಮಾಪನಗೊಂಡಿರುವ ಸಕ್ಕರೆ ಕಾರ್ಖಾನೆಗಳು ಇರುತ್ತವೆ. ಇವುಗಳಲ್ಲಿ 22 ಸಕ್ಕರೆ ಕಾರ್ಖಾನೆಗಳಿಗೆ ರಾಜ್ಯ ಸರ್ಕಾರದಿಂದ ಈವರೆಗೆ ರೂ. 628.61 ಕೋಟಿಗಳ ಸಾಲವನ್ನು ನೀಡಲಾಗಿದೆ. ವಿವರಗಳನ್ನು **ಅನುಬಂಧ – ಅ** ರಲ್ಲಿ ಒದಗಿಸಿದೆ.<br><br>ರಾಜ್ಯದ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು ಹಾಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ ಸಮೂಹ ಬ್ಯಾಂಕುಗಳ ವ್ಯವಸ್ಥೆಯಡಿಯಲ್ಲಿ ರಾಜ್ಯದ 11 ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ರೂ. 889.74 ಕೋಟಿಗಳ ಸಾಲವನ್ನು ನೀಡಲಾಗಿದ್ದು ವಿವರಗಳನ್ನು **ಅನುಬಂಧ – ಆ** ರಲ್ಲಿ ಒದಗಿಸಿದೆ. |
| (ಆ) | ಎಷ್ಟು ಸಕ್ಕರೆ ಕಾರ್ಖಾನೆಗಳು ನಷ್ಟದಲ್ಲಿವೆ; | ರಾಜ್ಯದ ಸಹಕಾರಿ ವಲಯದಲ್ಲಿರುವ 24 ಸಕ್ಕರೆ ಕಾರ್ಖಾನೆಗಳು ದಿನಾಂಕ: 31.03.2021ರ ಅಂತ್ಯಕ್ಕೆ ಒಟ್ಟು ರೂ.2388.19 ಕೋಟಿಗಳ ನಷ್ಟವನ್ನು ಹೊಂದಿದ್ದು, ವಿವರಗಳನ್ನು **ಅನುಬಂಧ – ಆ** ರಲ್ಲಿ ಒದಗಿಸಿದೆ. |
| (ಇ) | ನಷ್ಟದಲ್ಲಿರುವ ಸಕ್ಕರೆ ಕಾರ್ಖಾನೆಗಳನ್ನು ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ರಾಜ್ಯದಲ್ಲಿ ಕೆಲವೊಂದು ಸಹಕಾರಿ ಸಕ್ಕರೆ ಕಾರ್ಖಾನೆಗಳು ದುಡಿಯುವ ಬಂಡವಾಳದ ಕೊರತೆ ಮತ್ತು ಇತರೆ ಆಡಳಿತಾತ್ಮಕ ಕಾರಣಗಳಿಂದಾಗಿ ಸ್ಥಗಿತಗೊಂಡಿದ್ದವು. ಇಂತಹ ಸಕ್ಕರೆ ಕಾರ್ಖಾನೆಗಳನ್ನು ಕಬ್ಬು ಬೆಳೆಗಾರ ರೈತರ ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ಪುನಶ್ಚೇತನಗೊಳಿಸಲು ತೀರ್ಮಾನಿಸಿ ಈವರೆಗೆ ಒಟ್ಟು 8 ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ದೀರ್ಘಾವಧಿಯ ಮೇಲೆ ಗುತ್ತಿಗೆ ನೀಡುವುದರ ಮೂಲಕ ಪುನಶ್ಚೇತನಗೊಳಿಸಲಾಗಿರುತ್ತದೆ. ಪ್ರಸ್ತುತ ಶ್ರೀ ಶ್ರೀರಾಮ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಕೆ.ಆರ್.ನಗರ ಮತ್ತು ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಮುಧೋಳ ಇವುಗಳನ್ನು ಎಲ್.ಆರ್.ಓ.ಟಿ ಆಧಾರದ ಮೇಲೆ ಖಾಸಗಿಯವರಿಗೆ ಗುತ್ತಿಗೆ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ.<br><br>ನಷ್ಟದಲ್ಲಿರುವ ಮತ್ತು ವಿವಿಧ ಕಾರಣಗಳಿಂದ ಸ್ಥಗಿತಗೊಂಡಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಧೀರ್ಘಾವಧಿಗೆ ಗುತ್ತಿಗೆ ನೀಡುವುದರ ಮೂಲಕ ಪುನಶ್ಚೇತನಗೊಳಿಸುವುದು ಸರ್ಕಾರದ ಪ್ರಸ್ತುತ ನೀತಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನಷ್ಟದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಪುನಶ್ಚೇತನಗೊಳಿಸಲು ರಾಜ್ಯ ಸರ್ಕಾರದಿಂದ ಆರ್ಥಿಕ ಉತ್ತೇಜನ ನೀಡುವ ಪ್ರಸ್ತಾವನೆ ಸರ್ಕಾರದ ಹಂತದಲ್ಲಿ ಇರುವುದಿಲ್ಲ. |

ಸಿಐ 350 ಸಿಓಎಫ್ 2021

(ಶಂಕರ ಬಿ. ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು.

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 185ಕ್ಕೆ**

**ಅನುಬಂಧ- 6**

(ರೂ. ಕೋಟಿಗಳಲ್ಲಿ)

| ಕ್ರ. ಸಂ. | ಕಾರ್ಖಾನೆಯ ಹೆಸರು | ಸಾಲ | ಲಾಭ/ ನಷ್ಟ |
|---|---|---|---|
| | **ಕಾರ್ಯನಿರತ ಸಹಕಾರಿ ಸಕ್ಕರೆ ಕಾರ್ಖಾನೆಗಳು** | | |
| 1 | ಘಟಪ್ರಭಾ ಸಸಕಾನಿ., ಗೋಕಾಕ್, ಬೆಳಗಾವಿ ಜಿಲ್ಲೆ. | 70.00 | -33.09 |
| 2 | ಹಾಲಸಿದ್ಧನಾಥ ಸಸಕಾನಿ., ನಿಪ್ಪಾಣಿ, ಬೆಳಗಾವಿ ಜಿಲ್ಲೆ. | - | -119.00 |
| 3 | ಕೃಷ್ಣಾ ಸಸಕಾನಿ., ಅಥಣಿ, ಬೆಳಗಾವಿ ಜಿಲ್ಲೆ. | 20.47 | -45.00 |
| 4 | ಮಲಪ್ರಭಾ ಸಸಕಾನಿ., ಎಂ.ಕೆ.ಹುಬ್ಬಳ್ಳಿ, ಬೆಳಗಾವಿ ಜಿಲ್ಲೆ. | - | -96.00 |
| 5 | ಸೋಮೇಶ್ವರ ಸಸಕಾನಿ., ಬೈಲಹೊಂಗಲ, ಬೆಳಗಾವಿ ಜಿಲ್ಲೆ. | 25.00 | -105.00 |
| 6 | ನಂದಿ ಸಸಕಾನಿ., ಕೃಷ್ಣಾನಗರ, ವಿಜಯಪುರ ಜಿಲ್ಲೆ. | 14.38 | 0.17 |
| 7 | ರೈತರ ಸಸಕಾನಿ., ರನ್ನಾನಗರ, ಮುಧೋಳ ತಾ, ಬಾಗಲಕೋಟೆ ಜಿಲ್ಲೆ. | 20.84 | -152.00 |
| 8 | ನಾರಂಜ ಸಸಕಾನಿ., ಇಮಾಂಪುರ, ಬೀದರ್ ಜಿಲ್ಲೆ. | 12.00 | -305.77 |
| 9 | ಬೀದರ್ ಸಸಕಾನಿ., ಹಳ್ಳಿಖೇಡ್, ಹುಮ್ನಾಬಾದ್ ತಾ., ಬೀದರ್ ಜಿಲ್ಲೆ. | 50.00 | -307.00 |
| 10 | ಮಹಾತ್ಮಗಾಂಧಿ ಸಸಕಾನಿ., ಭಾಲ್ಕಿ, ಬೀದರ್ ಜಿಲ್ಲೆ. | 29.24 | -248.00 |
| 11 | ಭೀಮಾಶಂಕರ ಸಸಕಾನಿ., ಮರಗೂರು, ಇಂಡಿ ತಾ., ವಿಜಯಪುರ ಜಿಲ್ಲೆ | 2.36 | -52.00 |
| 12 | ಸಂಗಂ ಸಸಕಾನಿ., ಹಿಡಕಲ್ ಡ್ಯಾಂ, ಹುಕ್ಕೇರಿ ತಾ., ಬೆಳಗಾವಿ ಜಿಲ್ಲೆ. | - | -12.90 |
| 13 | ದಿ ಮಾರ್ಕಂಡೇಯ ಸಸಕಾನಿ., ಕಾಕತಿ, ಬೆಳಗಾವಿ ಜಿಲ್ಲೆ. | 32.43 | -23.71 |
| 14 | ಹಿರಣ್ಯಕೇಶಿ ಸಸಕಾನಿ., ಸಂಕೇಶ್ವರ, ಬೆಳಗಾವಿ ಜಿಲ್ಲೆ | - | -209.58 |
| 15 | ಚಿದಾನಂದ ಬಸಪ್ರಭು ಕೋರೆ ಸಸಕಾನಿ., ಚಿಕ್ಕೋಡಿ, ಬೆಳಗಾವಿ ಜಿಲ್ಲೆ. | - | -136.00 |
| | **ಗುತ್ತಿಗೆ ನೀಡಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳು** | | |
| 16 | ಧನಲಕ್ಷ್ಮಿ ಸಸಕಾನಿ., ರಾಮದುರ್ಗ [ಇ.ಐ.ಡಿ. ಪ್ಯಾರಿ (ಇಂಡಿಯಾ) ಲಿ. ರವರಿಗೆ ಗುತ್ತಿಗೆ ನೀಡಲಾಗಿದೆ], ಬೆಳಗಾವಿ ಜಿಲ್ಲೆ. | - | 6.00 |
| 17 | ಮೃಢಗಿರಿ ಸಸಕಾನಿ., ಮುಂಡರಗಿ (ವಿಜಯನಗರ ಶುಗರ್ಸ್ ರವರಿಗೆ ಗುತ್ತಿಗೆ ನೀಡಲಾಗಿದೆ), ಗದಗ ಜಿಲ್ಲೆ. | - | -5.79 |
| 18 | ಕರ್ನಾಟಕ ಸಸಕಾನಿ., ಸಂಗೂರು (ಜಿಎಂ ಶುಗರ್ಸ್ ರವರಿಗೆ ಗುತ್ತಿಗೆ ನೀಡಲಾಗಿದೆ), ಹಾವೇರಿ ಜಿಲ್ಲೆ. | 28.22 | -68.00 |
| 19 | ರಾಯಬಾಗ ಸಸಕಾನಿ., ರಾಯಬಾಗ (ರೇಣುಕಾ ಶುಗರ್ಸ್ ರವರಿಗೆ ಗುತ್ತಿಗೆ ನೀಡಲಾಗಿದೆ), ಬೆಳಗಾವಿ ಜಿಲ್ಲೆ. | 16.80 | -71.00 |
| 20 | ಹೇಮಾವತಿ ಸಸಕಾನಿ., ಶ್ರೀನಿವಾಸಪುರ (ಚಾಮುಂಡೇಶ್ವರಿ ಶುಗರ್ಸ್ ರವರಿಗೆ ಗುತ್ತಿಗೆ ನೀಡಲಾಗಿದೆ), ಹಾಸನ ಜಿಲ್ಲೆ. | - | 3.00 |
| 21 | ಶ್ರೀ ಭಾಗ್ಯಲಕ್ಷ್ಮಿ ಸಸಕಾನಿ., ಖಾನಾಪುರ (ಲೈಲಾ ಶುಗರ್ಸ್ ರವರಿಗೆ ಗುತ್ತಿಗೆ ನೀಡಲಾಗಿದೆ), ಬೆಳಗಾವಿ ಜಿಲ್ಲೆ. | 22.67 | -92.00 |
| 22 | ಆಳಂದ ಸಸಕಾನಿ., ಆಳಂದ (ಎನ್ಎಸ್ಎಲ್ ಶುಗರ್ಸ್ ರವರಿಗೆ ಗುತ್ತಿಗೆ ನೀಡಲಾಗಿದೆ), ಕಲಬುರಗಿ ಜಿಲ್ಲೆ. | 23.04 | -53.00 |